# ವಾತ್ಸಲ್ಯಭಕ್ತಿಗೊಂದು ಉಜ್ವಲ ನಿದರ್ಶನ :

# ಮಹಾಭಕ್ತೆ ಗೋಪಾಲೇರ್ ಮಾ

ಎದುರ್ಕಳ ಕೆ. ಶಂಕರನಾರಾಯಣ ಭಟ್

***ಅನೇಕ ಕೃತಿಗಳ ಮೂಲಕ ಕನ್ನಡ ಜನತೆಗೆ ಪರಿಚಿತರಾಗಿರುವ ಶ್ರೀ ಶಂಕರನಾರಾಯಣ ಭಟ್ಟರು ಶ್ರೀರಾಮಕೃಷ್ಣರ ಶ್ರೇಷ್ಠ ಮಹಿಳಾ ಭಕ್ತರಲ್ಲಿ ಒಬ್ಬರಾದ ಅಘೋರಮಣಿದೇವಿಯವರ ಅಪೂರ್ವ ಜೀವನಚಿತ್ರವನ್ನು ನಿರೂಪಿಸಿರುವರು.***

**ಕ**ಲ್ಕತ್ತೆಯ ಸಮೀಪದ ಕಾಮಾರಹಟಿ ಎಂಬಲ್ಲಿ ಪಾವನ ಗಂಗಾತೀರದಲ್ಲಿ ಒಂದು ಮುಂಜಾನೆ ಬ್ರಾಹ್ಮೀಮುಹೂರ್ತದಲ್ಲಿ ನಡುಹರೆಯವನ್ನು ದಾಟಿದ ವಿರಕ್ತ ಮಹಿಳೆಯೊಬ್ಬಳು ಭಕ್ತಿಯಿಂದ ತನ್ನ ಇಷ್ಟದೇವತಾಮಂತ್ರದ ಜಪ ಮಾಡುತ್ತಾ ಕುಳಿತಿದ್ದಾಳೆ. ಪ್ರಶಾಂತವಾದ ಪವಿತ್ರ ಭಾಗೀರಥಿಯ ತೀರದಲ್ಲಿ ಸದ್ದುಗದ್ದಲಗಳಿಲ್ಲದ ಒಂದು ಪುಟ್ಟ ಕೊಠಡಿಯಲ್ಲಿ ವಾಸ ಮಾಡುತ್ತಿದ್ದ ಆ ಮಹಿಳೆಗೆ ನಿದ್ರಾಹಾರಗಳಿಗಿಂತ ಮೇಲಾಗಿ ಭಗವನ್ನಾಮಸ್ಮರಣೆ ಮತ್ತು ಧ್ಯಾನ ಇವುಗಳೇ ಮುಖ್ಯವಾಗಿದ್ದವು. ತನ್ನ ಇಷ್ಟಮೂರ್ತಿ ಬಾಲಗೋಪಾಲನನ್ನು ತುಂಬುಹೃದಯದಿಂದ ಪ್ರಾರ್ಥಿಸಿ ಇಷ್ಟಮಂತ್ರವನ್ನು ಆಕೆ ಜಪಿಸುತ್ತಾ ಇದ್ದಂತೆ ಅವಳ ಎಡಬದಿಯಲ್ಲಿ ದಿವ್ಯ ತೇಜಸ್ಸಿನಿಂದ ಕೂಡಿದ ಮಹಾಪುರುಷರೊಬ್ಬರು ಕುಳಿತುಕೊಂಡಿರುವುದನ್ನು ಕಂಡು ಅಚ್ಚರಿಗೊಂಡಳು! ಏನೋ ಭ್ರಮೆ ಇರಬೇಕಷ್ಟೆ ಎಂದುಕೊಂಡು ಒಂದು ನಿಮಿಷ ಕಾಲ ಸುಮ್ಮನಿದ್ದಳು. ಆದರೆ ತಾನು ಕಾಣುವ ದಿವ್ಯಪುರುಷ ನಗುನಗುತ್ತಾ ಸಚೇತನವಾಗಿ ತನ್ನ ಬದಿಯಲ್ಲಿ ಇರುವುದನ್ನು ಸ್ಪಷ್ಟವಾಗಿ ಗುರುತಿಸಿದಳು. ಭ್ರಮೆಯೋ ಸತ್ಯವೋ ತೀರ್ಮಾನವಾಗಿಯೇ ಬಿಡಲಿ ಎಂದುಕೊಂಡು ಆ ಭಕ್ತೆಯು ತನ್ನ ಬದಿಯಲ್ಲಿ ಕುಳಿತಿದ್ದ ದಿವ್ಯಪುರುಷನ ಕಡೆಗೆ ಮತ್ತಷ್ಟು ಏಕಾಗ್ರತೆಯಿಂದ ನೋಡಿದಳು. ತಾನು ಆ ಪವಿತ್ರಾತ್ಮನನ್ನು ಹಿಂದೆ ಕಂಡ ನೆನಪಿದೆ, ಆದರೆ ಆ ಮಹಿಮಾ ಪುರುಷ ಈ ವೇಳೆಗೆ ಇಲ್ಲಿಗೆ ಹೇಗೆ ಬರಬಲ್ಲ? ಏಕೆ ಬರುತ್ತಾನೆ? ಎಂದುಕೊಂಡು ಆ ದಿವ್ಯ ಪುರುಷನನ್ನು ನೋಡುತ್ತಾ ಇದ್ದಂತೆ ಈಕೆಗೆ ಭಕ್ತಿಭಾವ ತುಂಬಿಬಂತು. ಸುಖಾಸೀನನಾಗಿ ಕುಳಿತಿದ್ದ ಮಹಾಪುರುಷನ ಕೈಯನ್ನು ಮುಟ್ಟಲು ಕೈಚಾಚಿದಳು. ಅಷ್ಟರಲ್ಲಿ ಆ ಪುರುಷನು ಅಲ್ಲಿಂದ ಕಣ್ಮರೆಯಾಗಿ ಅಲ್ಲಿ ಬದಲಿಗೊಂದು ಸುಮಾರು ಹತ್ತುತಿಂಗಳು ಪ್ರಾಯದ ದಿವ್ಯ ತೇಜೋವಂತ ಮುದ್ದು ಮಗು ಸಚೇತನವಾಗಿ ಕಾಣಿಸಿಕೊಂಡು ಮಹಿಳೆಯ ಎಡೆಗೆ ಅಂಬೆಗಾಲಿಟ್ಟುಕೊಂಡು ಬರಹತ್ತಿತು! ತಾನು ಜಪಿಸುತ್ತಿದ್ದ ಗೋಪಾಲಮಂತ್ರದ ದೇವಮಂಗಳ ಮೂರ್ತಿಯೇ ತನ್ನ ಮುಂದೆ ಸಚೇತನವಾಗಿ ಸಶರೀರಿಯಾಗಿ ಬಂದದ್ದನ್ನು ಕಂಡು ಆ ಭಕ್ತೆಯು ಅತ್ಯಂತ ಹರ್ಷಿತಳಾದಳು!



ಗೋಪಾಲೇರ್ ಮಾ.

ಆ ಮಹಾಭಕ್ತೆಯೇ ಗೋಪಾಲೇರ್ ಮಾ. ಆಕೆಯ ಆರಾಧ್ಯದೇವ ಬಾಲಗೋಪಾಲ. ಭಗವಂತನನ್ನು ವಾತ್ಸಲ್ಯಭಾವದಿಂದ ತನ್ನ ಮಗುವೆಂಬ ದೃಷ್ಟಿ ತಳೆದು ಆರಾಧಿಸಿ ಸಾಕ್ಷಾತ್ಕಾರ ಪಡೆದುದರಿಂದ ಆಕೆಗೆ **ಗೋಪಾಲನ ತಾಯಿ** ಎಂಬ ಹೆಸರು ಪ್ರಚಲಿತವಾಯಿತು. ಬಂಗಾಳ ಪ್ರಾಂತದಲ್ಲಿ ಜನ್ಮವೆತ್ತಿದ ಆಕೆಯ ಹೆಸರು ಬಂಗಾಳಿ ಭಾಷೆಯಲ್ಲಿ "ಗೋಪಾಲೇರ್ ಮಾ" ಎಂದು ಪ್ರಸಿದ್ಧವಾಯಿತು. ಅವಳ ನಿಜವಾದ ಹೆಸರು ಶ್ರೀಮತಿ ಅಘೋರಮಣಿದೇವಿ. ಅಂದು ಅವಳು ಜಪಾನುಷ್ಠಾನತತ್ಪರಳಾಗಿದ್ದಾಗ ಆಕೆಯ ಪಕ್ಕದಲ್ಲಿ ಪ್ರತ್ಯಕ್ಷವಾಗಿ ದರ್ಶನ ನೀಡಿದ ಮಹಾಪುರುಷರೇ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು.

ಎಳೆಯ ವಯಸ್ಸಿನಲ್ಲೇ ಪತಿವಿಯೋಗವಾಗಿ ಬಾಲವಿಧವೆಯಾದ ಅಘೋರಮಣಿದೇವಿ ತಾವು ಹುಟ್ಟಿ ಬೆಳೆದ ಬ್ರಾಹ್ಮಣ ಪುರೋಹಿತ ಕುಟುಂಬದಲ್ಲಿ ನಡೆದುಬಂದ ಸಂಪ್ರದಾಯದಂತೆ ತುಂಬ ಕಟ್ಟುನಿಟ್ಟಾಗಿ ವಿರಕ್ತಜೀವನವನ್ನು ನಡೆಸಲು ನಿಶ್ಚಯಿಸಿದರು. ಆ ಸಂದರ್ಭದಲ್ಲಿ ಅವರು ತಮ್ಮ ಕುಲಗುರುಗಳಿಂದ ಗೋಪಾಲಮಂತ್ರ ದೀಕ್ಷೆಯನ್ನು ತೆಗೆದುಕೊಂಡರು. ಆಮೇಲೆ ಸುಮಾರು ಮೂವತ್ತು ವರ್ಷಗಳಷ್ಟು ಕಾಲ ವ್ರತ, ಉಪವಾಸ, ಪೂಜೆ, ಜಪ, ಧ್ಯಾನಗಳಲ್ಲಿ ಕಳೆದರು. ಗಂಗಾತೀರದ ಕಾಮಾರಹಟಿಯ ತಮ್ಮ ಪುಟ್ಟ ಕೊಠಡಿಯೇ ಅವರ ತಪೋಭೂಮಿಯಾಯಿತು. ಕೊನೆಗೆ ದಕ್ಷಿಣೇಶ್ವರದ

ದೇವಮಾನವ ಶ್ರೀರಾಮಕೃಷ್ಣ ಪರಮಹಂಸರ ದರ್ಶನ ಲಾಭ ವನ್ನು ಅಘೋರಮಣಿದೇವಿ ಪಡೆದು, ಭಗವಂತನ ದಿವ್ಯ ಲೀಲೆಗಳ ಬಗೆಗೆ ಮತ್ತಷ್ಟು ವಿವರಗಳನ್ನು ಆಗಿಂದಾಗ್ಗೆ ಅವ ರೊಡನೆ ಸಂಭಾಷಣೆಗಳಿಂದ ಪಡೆದುಕೊಂಡು ಅವರ ವಿಶೇಷ ಕೃಪೆಗೆ ಪಾತ್ರರಾಗಿ ಧನ್ಯರಾದರು.

ತಮ್ಮ ಇಷ್ಟದೇವ ಬಾಲಗೋಪಾಲನ ಆರಾಧನೆಯನ್ನು ಶ್ರೀರಾಮಕೃಷ್ಣ ಪರಮಹಂಸರನ್ನು ಭೇಟಿಯಾದ ಅನಂತರ ಎಂದಿನಂತೆ ಮುಂದುವರಿಸಿಕೊಂಡು ಸಾಗುತ್ತಿದ್ದರು. ಜಪ ಧ್ಯಾನ ಗಳಲ್ಲಿ ವಿಶೇಷವಾದ ಆನಂದ ಉಂಟಾಗುತ್ತಿದ್ದ ಅಘೋರ ಮಣಿ ದೇವಿಯವರ ಜೀವನದಲ್ಲಿ ಮಹತ್ವಪೂರ್ಣವಾದ ನಿಧಿಯ ಸಾಕ್ಷಾತ್ಕಾರದ ಮಂಗಳಮುಹೂರ್ತ ಸನ್ನಿಹಿತವಾಯಿತು. ಅದೇ ದಿನ, ಆ ಪವಿತ್ರ ಬ್ರಾಹ್ಮೀಮುಹೂರ್ತದಲ್ಲಿ ಆರಾಧ್ಯ ದೇವ ಬಾಲಗೋಪಾಲನು ಅವರೆಡೆಗೆ ತೆವಳುತ್ತ ಬಂದನು. ನಯನಮನೋಹರ ಬಾಲಗೋಪಾಲನನ್ನು ಎತ್ತಿ ತಮ್ಮ ಮಡಿಲಲ್ಲಿ ಕುಳ್ಳಿರಿಸಿಕೊಂಡಾಗ ಅಘೋರಮಣಿದೇವಿಯವರಿಗೆ ಆದ ದಿವ್ಯಾನಂದ ನಿಜಕ್ಕೂ ಅವರ್ಣನೀಯ. ಆನಂದಬಾಷ್ಪ ಸುರಿಸುತ್ತಾ, "ಬಾಲಗೋಪಾಲದೇವಾ—ಮುದ್ದುಕಂದಾ" ಎಂದು ವಿಧವಿಧವಾಗಿ ಬಾಲಗೋಪಾಲಸ್ವಾಮಿಯನ್ನು ಭಕ್ತಿಯಿಂದ ಕೊಂಡಾಡಿದರು! ಸ್ತುತಿಸಿ ಮುದ್ದಾಡಿದರು ! ಅಷ್ಟರಲ್ಲಿ ದೇವಕುಮಾರ ಬಾಲಗೋಪಾಲನು "ಅಮ್ಮಾ, ನನಗೆ ತಿನ್ನಲು ಬೆಣ್ಣೆ ಬೇಕು" ಎಂದು ಮುದ್ದುಮುದ್ದಾಗಿ ಮಾತನಾಡುತ್ತಾ ಭಕ್ತೆ ಅಘೋರಮಣಿದೇವಿಯವರನ್ನು ಕೇಳಿದನು. ಆಗ ಅಘೋರ ಮಣಿದೇವಿ "ಬೆಣ್ಣೆ ನೀಡಲು ನಾನೋರ್ವ ಬಡವೆ ಮಗೂ. ನನ್ನಲ್ಲಿ ಹಣವಿಲ್ಲ. ನಾನೇನು ಮಾಡಲಿ? ಬೆಣ್ಣೆ ಎಲ್ಲಿಂದ ತರಲಿ?" ಎಂದು ಹೇಳಿದಳು. ಮುದ್ದು ಗೋಪಾಲ ತನಗೆ ಬೆಣ್ಣೆ ಇಲ್ಲದಿದ್ದರೆ ತಿನ್ನಲು ಏನಾದರೂ ಬೇಕೇ ಬೇಕು ಎಂದು ಹೇಳಿದ, ಅದಕ್ಕಾಗಿ ಕಾಡಿದ. ಕೊನೆಗೆ, ತಮ್ಮಲ್ಲಿದ್ದ ಒಂದಿಷ್ಟು ಕೊಬ್ಬರಿ ಮಿಠಾಯಿಯನ್ನು ತಿನ್ನಲು ನೀಡಿ ಅಘೋರಮಣಿಯು ಆ ದೇವಬಾಲನನ್ನು ಸಂತೈಸಿದರು. ಇನ್ನೂ ಬೆಳಗಾಗಿರಲಿಲ್ಲ. ತಾವು ಜಪ ಮಾಡಿ ನಿತ್ಯದಂತೆ ಕಾರ್ಯಕ್ರಮ ಪೂರೈಸಲಿಲ್ಲ ಎಂದುಕೊಂಡು ಅಘೋರಮಣಿಯವರು ಜಪಮಾಡಲು ಉದ್ಯುಕ್ತರಾದರು. ಆದರೆ ಬಾಲಗೋಪಾಲ ಅವರ ಮಡಿಲಲ್ಲಿ ಕುಳಿತು ಜಪಸರ ಎಳೆದು ಮಾತನಾಡಿಸುತ್ತಲೇ ಇದ್ದನು! ಕೊನೆಗೆ ಬೆಳಗಾಯಿತು. ಅಘೋರಮಣಿದೇವಿ ಮುದ್ದು ಬಾಲಗೋಪಾಲನನ್ನು ಎತ್ತಿಕೊಂಡು ದಕ್ಷಿಣೇಶ್ವರದ ದೇವಿ ಭವ ತಾರಿಣೀ ಮಂದಿರದಲ್ಲಿ ನೆಲೆಸಿದ್ದ ಶ್ರೀರಾಮಕೃಷ್ಣ ಪರಮ ಹಂಸರ ದರ್ಶನಕ್ಕೆ ಓಡೋಡಿ ಹೋದರು. ಶ್ರೀರಾಮಕೃಷ್ಣರನ್ನು ಕಾಣುತ್ತಾಲೇ "ಗೋಪಾಲ, ಬಾಲಗೋಪಾಲ" ಎಂದು ಭಾವ ಪೂರಿತವಾಗಿ ಕರೆದರು. ಆನಂದದಿಂದ ಅವರ ಮುಂದೆ ಕುಣಿ ದಾಡಿದರು. ಆಗ ಶ್ರೀರಾಮಕೃಷ್ಣರ ದೇಹದೊಳಗೆ ಬಾಲ ಗೋಪಾಲ ಪ್ರವೇಶ ಮಾಡುವುದು, ಸ್ವಲ್ಪಹೊತ್ತಿನ ನಂತರ ಹೊರಗೆ ಬರುವುದು ಹೀಗೆ ಮಾಡುತ್ತ ಇರುವುದನ್ನು ಕಂಡರು. ಆಗ ಶ್ರೀರಾಮಕೃಷ್ಣ ಪರಮಹಂಸರು ಮತ್ತು ಬಾಲಗೋಪಾಲ ಬೇರೆ ಅಲ್ಲ ಎಂಬ ಸ್ಪಷ್ಟ ಅರಿವು ಅಘೋರಮಣಿದೇವಿ ಗುಂಟಾಯಿತು. ಶ್ರೀರಾಮಕೃಷ್ಣರು ಅಘೋರಮಣಿದೇವಿಯನ್ನು "ಗೋಪಾಲೇರ್ ಮಾ" ಎಂದು ಕರೆದು ಅವರ ದಿವ್ಯಭಾವಸ್ಥಿತಿ ಸಮಾಧಾನಕ್ಕೆ ಬರುವಂತೆ ಮಾಡಿದರು.

ಭಗವಂತನನ್ನು ಕೈಯಾರೆ ಎತ್ತಿ ಮುದ್ದಾಡಿ ಧನ್ಯಳಾದ "ಗೋಪಾಲೇರ್ ಮಾ" ನವಯುಗದ ಯಶೋದೆ ಎಂಬ ಹೆಸರಿಗೆ ನೂರಕ್ಕೆ ನೂರರಷ್ಟು ಅರ್ಹರೇ ಸರಿ. ದಿನಬೆಳಗಾದರೆ ದೇವಶಿಶು ಬಾಲಗೋಪಾಲಸ್ವಾಮಿ ಆ ಮಹಾತಾಯಿಯ ಬಳಿ ಆಟವಾಡುತ್ತಾ, ಒಡನಾಡುತ್ತಾ ಇರುತ್ತಿದ್ದ. ಆಟ, ಊಟ, ಲಾಲನೆ, ಪಾಲನೆಗಳಲ್ಲಿ ತನ್ನನ್ನು ತಾನು ಮರೆತು ಗೋಪಾ ಲೇರ್ ಮಾ ದೇವಮಗುವಿನ ಸೇವೆ ಮಾಡಿದರು. ದಿವ್ಯಭಾವ ದಲ್ಲಿ ಸದಾ ನಿರತರಾಗಿರುತ್ತಿದ್ದರು.

ಹೀಗಿರುತ್ತಾ ದಿನಗಳು ಉರುಳಿದವು. ತಿಂಗಳು ಎರಡಾ ಯಿತು. ತನ್ನೊಡನೆಯೇ ಇದ್ದ ದೇವಬಾಲಕ ಇದ್ದಕ್ಕಿದ್ದಂತೆ ಕಣ್ಮರೆಯಾದುದನ್ನು ಸಹಿಸಲಾಗದೆ ಗೋಪಾಲೇರ್ ಮಾ ಶ್ರೀರಾಮಕೃಷ್ಣ ಪರಮಹಂಸರ ಬಳಿ ತೆರಳಿ ತನ್ನ ದುಃಖವನ್ನು ಅವರಲ್ಲಿ ತೋಡಿಕೊಳ್ಳುತ್ತಾಳೆ. "ದಿವ್ಯಭಾವ, ದಿವ್ಯದರ್ಶನ ಇವುಗಳನ್ನು ದೀರ್ಘಕಾಲ ಅನುಭವಿಸಲು ಈ ಪಾಂಚಭೌತಿಕ ದೇಹದಿಂದ ಸಾಧ್ಯವಿಲ್ಲ. ಹಾಗೆ ಅನುಭವಿಸಿದರೆ ಈ ದೇಹ ನಿರ್ಬಲವಾಗಿ ಇಪ್ಪತ್ತೊಂದು ದಿವಸಗಳಲ್ಲಿ ಪ್ರಾಣಹೀನವಾಗಿ ಧರೆಯಲ್ಲಿ ಒಣಗೆಲೆಯಂತೆ ಉದುರಿ ಬೀಳುತ್ತದೆ" ಎಂಬಿತ್ಯಾದಿ ಯಾಗಿ ಹೇಳಿ, ದೇವರ ವಿಶೇಷ ಕೃಪೆಯಿಂದ, ಈ ತನಕ ದೇವ ಬಾಲನ ದರ್ಶನ ಮತ್ತು ಸೇವೆಯ ಅವಕಾಶವನ್ನು ಪಡೆ ದದ್ದಾಗಿದೆ ಎಂದು ಪರಮಹಂಸರು ಆಕೆಗೆ ವಿವರಿಸಿ ಸಮಾಧಾನ ಪಡಿಸಿದರು. ಶ್ರೀರಾಮಕೃಷ್ಣರ ಮಾತು ಕೇಳುತ್ತಿದ್ದಂತೆ ಅವರಿಗೆ ತನ್ನ ಬಾಲಗೋಪಾಲ ಶ್ರೀರಾಮಕೃಷ್ಣರಲ್ಲಿರುವಂತೆ ಭಾಸವಾಯಿತು, ತುಂಬ ಸಮಾಧಾನವಾಯಿತು. ಅಂದಿನಿಂದ ತಾವು ಇಚ್ಛಿಸಿದಂತೆ ದಿವ್ಯಧ್ಯಾನದಲ್ಲಿ ಬಾಲಗೋಪಾಲದರ್ಶನ ಹಾಗೂ ಭಗವ ದಾನಂದವನ್ನು ಅನುಭವಿಸುತ್ತಾ ಬಾಳನ್ನು ಮುಂದುವರಿಸಿದರು.

ಭಕ್ತಿಯೋಗದ ಸಾಧಕರಿಗೆ ವಾತ್ಸಲ್ಯಭಕ್ತಿಯು ಸಿದ್ಧಿಯ ಪಥದಲ್ಲಿ ನೆರವನ್ನೀವ ಸಾಧನಾಸೂತ್ರಗಳಲ್ಲಿ ಒಂದಾಗಿರುತ್ತದೆ. ಭಗವಂತನನ್ನು ತನ್ನ ಮಗು ಎಂದು ಭಾವಿಸಿ ಅದಕ್ಕೆ ಅನುಗುಣ ವಾಗಿ ನಡಕೊಳ್ಳುವುದೇ ವಾತ್ಸಲ್ಯಭಕ್ತಿಯ ವಿವರಣೆಯ ಸಾರ. ತಾಯಿ-ಮಗುವಿನ ನಡುವಿನ ಅನ್ಯೋನ್ಯ ಪ್ರೀತಿಯೇ ವಾತ್ಸಲ್ಯ ಭಕ್ತಿಯ ಸ್ವರೂಪವಾಗಿದೆ. ಭಗವಂತನು ಸರ್ವಶಕ್ತ, ಸೃಷ್ಟಿಸ್ಥಿತಿ ಸಂಹಾರಗಳ ಕರ್ತೃ ಎಂಬ ಆತನ ದಿವ್ಯಶಕ್ತಿಗಳ ಕಲ್ಪನೆಯಿಂದ ಮಾನವನಲ್ಲಿ ದೇವರ ಕುರಿತು ಒಂದು ರೀತಿಯ ಭಯದ ಭಾವನೆ ಇರುತ್ತದೆ. ಈ ಭಯವು ದೇವರ ಮೇಲಿನ ವಿಶೇಷ ಪ್ರೀತಿಭಾವನೆಯಿಂದ ನಿರ್ಮೂಲವಾಗುತ್ತದೆ. ಭಕ್ತಿಯೋಗದ

ಜೀವಾಳವೇ ಪ್ರೀತಿ. ಎಲ್ಲಿ ನಿಜವಾದ, ನಿಷ್ಕಲ್ಮಶವಾದ ಪ್ರೀತಿ ಇರುವುದೋ ಅಲ್ಲಿ ಭಯ, ಫಲಾಪೇಕ್ಷೆ, ಭಾವನೆಗಳಿಗೆ ಅವಕಾಶವಿರುವುದಿಲ್ಲ. ಹಾಗಾಗಿ ಪರಿಶುದ್ಧ ಪ್ರೀತಿಯ ನೆಲೆಗೊಳ್ಳುವಿಕೆಗಾಗಿ ತಾಯಿ ಮಗುವಿನ ಸಂಬಂಧದ ವಾತ್ಸಲ್ಯಭಕ್ತಿಯನ್ನು ಭಕ್ತನು ತನ್ನ ಗುರಿಸಾಧನೆಗಾಗಿ ಅನುಷ್ಠಾನಕ್ಕೆ ತರುತ್ತಾನೆ. ಈ ಭಾವದಲ್ಲಿ ಭಕ್ತನು ಭಗವಂತನಿಂದ ಏನನ್ನೂ ಬಯಸದೆ ಅವನನ್ನು ತಾಯಿಯು ತನ್ನ ಮಗುವನ್ನು ಪ್ರೀತಿಸುವಂತೆ ಪ್ರೀತಿಸುತ್ತಾನೆ. ವಾತ್ಸಲ್ಯಭಾವದಿಂದ ಭಗವಂತನೊಡನೆ ಸಂಬಂಧವನ್ನು ಇಟ್ಟುಕೊಳ್ಳುತ್ತಾನೆ.

ಈ ಕುರಿತು ಉತ್ಕೃಷ್ಟವಾದ ಒಂದು ಉದಾಹರಣೆಯಾಗಿ ಅರಳಿ ಬೆಳಗಿದ ಆಧ್ಯಾತ್ಮಿಕ ಜೀವಿ ಗೋಪಾಲೇರ್ ಮಾ. ಅವರ ಮತ್ತು ಶ್ರೀರಾಮಕೃಷ್ಣ ಪರಮಹಂಸರ ಪರಸ್ಪರ ಸಂಬಂಧವಾದರೂ ಕೂಡ ತಾಯಿ ಮಗುವಿನಂತೆಯೇ ಇತ್ತು. ಸರ್ವಮತ, ಸರ್ವಯೋಗಗಳನ್ನು ಸತ್ಯವೆಂದು ಸಾರಿದ ಶ್ರೀರಾಮಕೃಷ್ಣ ಪರಮಹಂಸರು ಎಲ್ಲ ಧಾರ್ಮಿಕ ಪಥಗಳನ್ನೂ ಸ್ವಯಂ ಲೀಲಾ ಆದರ್ಶಜೀವನದ ಮೂಲಕ ಪವಿತ್ರಗೊಳಿಸಿದರು. ಈ ದಿಸೆಯಲ್ಲಿ ವಾತ್ಸಲ್ಯಭಕ್ತಿಯ ಬಗೆಗೆ ಶ್ರೀರಾಮಕೃಷ್ಣ ಪರಮಹಂಸರು ಮನುಕುಲಕ್ಕೆ ನೀಡಿದ ಸಚೇತನ ಭಾಷ್ಯ, ಉಜ್ವಲ ನಿದರ್ಶನವೇ ಗೋಪಾಲೇರ್ ಮಾ ಎಂದರೆ ಸತ್ಯಕ್ಕೆ ದೂರವಾದ ಮಾತಾಗಲಾರದು.

ದೈಹಿಕ ದೃಷ್ಟಿಯಿಂದ ಮಹಿಳೆಯಾಗಿದ್ದ ಗೋಪಾಲೇರ್ ಮಾ ಅಧ್ಯಾತ್ಮಸತ್ಯದ ಸಾಕ್ಷಾತ್ಕಾರವು ಸ್ತ್ರೀಯಿಂದ ಅದೆಷ್ಟು ಸರಿಯಾಗಿ ಸಾಧಿಸಿ ಪಡೆಯಬಲ್ಲ ದಿವ್ಯ ಅನುಭವ ಹೌದಾಗಿದೆ ಎಂಬುದನ್ನು ಉನ್ನತೋನ್ನತವಾದ ಸ್ವಯಂ ಜೀವಿತಾದರ್ಶದಿಂದ ತೋರಿಸಿಕೊಟ್ಟಿರುತ್ತಾರೆ. ಸತತವಾದ ಸಾಧನೆ, ನಿಶ್ಚಲವಾದ ಭಗವದ್ಭಕ್ತಿ, ಸಂಶಯರಹಿತವಾದ ಶ್ರದ್ಧೆ ಇದ್ದಲ್ಲಿ ಆಧ್ಯಾತ್ಮಿಕ ಸಾಧನೆಯು ಅದೆಷ್ಟು ಸುಲಭ, ಆನಂದದಾಯಕ ಎನ್ನುವುದು ಗೋಪಾಲೇರ್ ಮಾರವರ ಬದುಕಿನ ಪುಸ್ತಕದ ಪುಟಪುಟಗಳಲ್ಲೂ ಕೂಡ ಸ್ಪಷ್ಟವಾಗಿ ಚಿತ್ರಿಸಲ್ಪಟ್ಟಿದೆ.

"ಕಾಣದ ದೇವರಿಗೆ ಕೈ ಮುಗಿಯಬೇಕೇಕೆ?" "ಕರೆದರೆ ಓ ಎನ್ನದ ಭಗವಂತನನ್ನು ಭಜಿಸಬೇಕೇಕೆ?" ಎಂಬ ಸಂದೇಹ ಸಾಮಾನ್ಯವಾಗಿ ಜನರಲ್ಲಿ ಮೂಡಿಬರುವುದಿದೆ. ದೇವರೆಂದರೆ ಮಾನವನು ಈ ದೇಹ ಸಹಿತ ಇರುವಾಗಲೇ ಕಂಡು ಅವನೊಡನೆ ಆಧ್ಯಾತ್ಮಿಕ ಸಂಬಂಧ ಬೆಳೆಸಿ ದಿವ್ಯಾನಂದ ಪಡೆಯಲು ಸಾಧ್ಯವಿರುವ ಒಂದು ದಿವ್ಯಶಕ್ತಿ. ಅದು ಸಾಕಾರವೂ ಹೌದು, ನಿರಾಕಾರವೂ ಹೌದು ಎಂದು ವೇದೋಪನಿಷತ್ತುಗಳು ಸಾರಿರುವ ಮಹಾಸತ್ಯಕ್ಕೆ ಗೋಪಾಲೇರ್ ಮಾ ನಿದರ್ಶನಾತ್ಮಕವಾಗಿ ಬಾಳಿ ಬೆಳಗಿರುತ್ತಾರೆ.

ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು ದೇಹತ್ಯಾಗ ಮಾಡಿ ಇಳೆಯಿಂದ ಕಣ್ಮರೆಯಾದ ನಂತರ ಸುಮಾರು ಎರಡು ದಶಕಗಳಷ್ಟು ಕಾಲ ಗೋಪಾಲೇರ್ ಮಾ ಇಹದಲ್ಲಿ ಬದುಕಿ ಉಳಿದರು. ದಿನನಿತ್ಯ ನಿಯಮಿತ ವೇಳೆಯಲ್ಲಿ ಜಪ ಧ್ಯಾನಗಳನ್ನು ಮಾಡುತ್ತಿದ್ದು ಉಳಿದ ವೇಳೆಯಲ್ಲಿ ಭಗವಂತನ ಸರ್ವವ್ಯಾಪಕವಾದ ಇರವಿನ ಅರಿವಿನ ಭಾವದೊಡನೆ ಆನಂದದಿಂದ ತುಂಬಿರುತ್ತಿದ್ದರು. ಶ್ರೀರಾಮಕೃಷ್ಣ ಪರಮಹಂಸರಲ್ಲಿ ತನ್ನ ಆರಾಧ್ಯದೇವ ಬಾಲಗೋಪಾಲನನ್ನು ಕಂಡು ಶ್ರೀರಾಮಕೃಷ್ಣರಿಗೂ ಬಾಲಗೋಪಾಲನಿಗೂ ಭೇದವಿಲ್ಲ ಎಂದು ಸ್ವಾನುಭವದಿಂದ ಅರಿತುಕೊಂಡ ಗೋಪಾಲೇರ್ ಮಾ ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಅನೇಕ ಬಾರಿ ದೈವೀಕವಾದ ರೀತಿಯಲ್ಲಿ ಅವರ ದಿವ್ಯದರ್ಶನಭಾಗ್ಯ ಹೊಂದಿ ಸಂತೃಪ್ತರಾಗಿರುತ್ತಾರೆ. ಗೋಪಾಲೇರ್ ಮಾರವರು ತಮ್ಮ ಕೊಠಡಿಯಲ್ಲಿ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಭಾವಚಿತ್ರವೊಂದನ್ನು ಇಟ್ಟುಕೊಂಡಿದ್ದು ನಿತ್ಯವೂ ಅದನ್ನು ಭಕ್ತಿಗೌರವದಿಂದ ಪೂಜಿಸುತ್ತಿದ್ದರು.

ಗೋಪಾಲೇರ್ ಮಾರವರ ಜೀವಿತದ ಕೊನೆ ಹಂತದಲ್ಲಿ ಅವರನ್ನು ಸ್ವಾಮಿ ವಿವೇಕಾನಂದರ ಧೀರಸಂನ್ಯಾಸಿಶಿಷ್ಯೆ ಸೋದರಿ ನಿವೇದಿತಾರವರು ತಮ್ಮ ಬಳಿ ಉಳಿಸಿಕೊಂಡು ಶುಶ್ರೂಷೆ ಮಾಡಿ ಮಗಳು ತಾಯಿಯನ್ನು ಮಮತೆಯಿಂದ ನೋಡಿಕೊಳ್ಳುವಂತೆ ಕೊನೆತನಕ ನೋಡಿಕೊಂಡಿರುತ್ತಾರೆ.

ಸಾಮಾನ್ಯವಾದ ನೆಲೆಯಲ್ಲಿದ್ದ ಓರ್ವ ವನಿತೆ ಭಗವಂತನ ನಾಮಜಪ, ಧ್ಯಾನಗಳಿಂದ ಭಗವತ್ಕೃಪೆಗೆ ಪಾತ್ರಳಾಗಿ ಅದೆಷ್ಟು ಮೇಲ್ಮಟ್ಟಕ್ಕೇರಿ ಪವಿತ್ರಳಾಗಿ ದಿವ್ಯ ಸಾಕ್ಷಾತ್ಕಾರವನ್ನು ಪಡೆದು ಪರಮಾನಂದಸಂಪನ್ನಳಾಗಲು ಸಾಧ್ಯ ಎಂಬುದಕ್ಕೆ ಗೋಪಾಲೇರ್ ಮಾರವರು ಶ್ರೇಷ್ಠ ನಿದರ್ಶನವಾಗಿ ಬದುಕಿ ಅರಳಿ ಬೆಳಗಿದರು. ಕೊನೆಗವರು ಇಹಲೋಕದ ಯಾತ್ರೆಯನ್ನು ಪೂರೈಸುವ ಕಾಲ ಕೂಡಿ ಬಂತು. ಆ ಸಂದರ್ಭದಲ್ಲಿ ಅವರು ಪವಿತ್ರವಾದ ಗಂಗಾನದಿಯ ದಡದಲ್ಲಿ ತಂಗಿದ್ದು ತಮ್ಮ ಜೀವಿತಯಾತ್ರೆ ಮುಗಿಸಲು ಬಯಸಿದರು. ಅದರಂತೆ ಅದಕ್ಕೆ ಸೋದರಿ ನಿವೇದಿತಾರವರು ಸೂಕ್ತವಾದ ವ್ಯವಸ್ಥೆ ಮಾಡಿದರು. ಗೋಪಾಲೇರ್ ಮಾರವರು ವೃದ್ಧೆಯಾಗಿದ್ದು ದೇಹಾರೋಗ್ಯ ಕುಂದಿದವರಾಗಿದ್ದರು. ಅವರು ಗಂಗಾನದಿ ತೀರದಲ್ಲಿ ಇಳಕೊಂಡು ತುಂಬ ಸಂತೋಷದಿಂದ ದಿವ್ಯಭಾವದಿಂದ ಕೂಡಿ ಜೀವನದ ಕೊನೇ ಗಳಿಗೆಯನ್ನು ನಿರೀಕ್ಷಿಸುತ್ತಿದ್ದರು. ಹೀಗೆ ಗಂಗೆಯ ದಡಕ್ಕೆ ಬಂದು ಉಳಿದ ಎರಡನೆಯ ದಿವಸ, ಸೂರ್ಯೋದಯದ ಮಂಗಳ ಮುಹೂರ್ತದಲ್ಲಿ, ಗೋಪಾಲೇರ್ ಮಾರವರು ೧೯೦೬ನೇ ಇಸವಿ ಜುಲೈ ತಿಂಗಳ ಎಂಟನೇ ತೇದಿಯಂದು ತಮ್ಮ ತೊಂಭತ್ತನೇ ವಯಸ್ಸಿನಲ್ಲಿ ಪುಣ್ಯ ಗಂಗಾ ನದಿಯ ಜಲ ಸ್ಪರ್ಶಿಸಿಕೊಂಡೇ ಭಗವತ್ ಸ್ಮರಣೆಯೊಡನೆ ಪ್ರಾಣತ್ಯಾಗ ಮಾಡಿ ಈ ಪ್ರಪಂಚದಿಂದ ಕಣ್ಮರೆಯಾದರು.

*